■ ಹನಿ

# ಪಿಚೈ ಎಂಬ ಸುಂದರ ಕನಸು

ಮಾಹಿತಿ- ತಂತ್ರಜ್ಞಾನ ಕ್ಷೇತ್ರದ ಯಶೋಗಾಥೆಗಳಿಗೆ ಬರವೇ ಇಲ್ಲ. ಈ ಸುಂದರರಾಜನ್ ಪಿಚೈ ಎನ್ನುವ 43ರ ಹರೆಯದ ತಮಿಳು ಯುವಕನನ್ನೇ ನೋಡಿ. ಕೆಲವೇ ವರ್ಷಗಳ ಹಿಂದೆ ಮದ್ರಾಸಿನ ಎರಡು ಬೆಡ್‌ರೂಮ್‌ಗಳ ಸಣ್ಣದೊಂದು ಅಪಾರ್ಟ್‌ಮೆಂಟ್‌ನಲ್ಲಿ ಅಪ್ಪ-ಅಮ್ಮ, ತಮ್ಮನ ಜತೆಗೆ ವಾಸವಾಗಿದ್ದ ಹುಡುಗನೀತ. ಅಪ್ಪ ಜಿಇಸಿ ಕಂಪೆನಿಯಲ್ಲಿ ಸೀನಿಯರ್ ಎಲೆಕ್ಟ್ರಿಕಲ್ ಎಂಜಿನಿಯರ್. ಅಮ್ಮ ಯಾವುದೋ ಕಚೇರಿಯಲ್ಲಿ ಸ್ಟೆನೋಗ್ರಾಫರ್. ಕಾಲೇಜು ಕಲಿಯುತ್ತಿದ್ದಾಗ ಮನೆಯಲ್ಲಿ ಟೀವಿ ಇರಲಿಲ್ಲ, ಅಪ್ಪನ ಬಳಿ ಕಾರು ಇರಲಿಲ್ಲ. ಇದ್ದ ಒಂದು ಲ್ಯಾಂಬ್ರೆಟಾ ಸ್ಕೂಟರ್‌ನಲ್ಲೇ ಎಲ್ಲರೂ ಓಡಾಡಬೇಕಿತ್ತು. ಆದರೆ ಇವತ್ತು ಎಲ್ಲವೂ ಇದೆ. ಅಮೆರಿಕದಲ್ಲಿ ಗೂಗಲ್ ಕಂಪೆನಿಯ ಸಿಇಓ ಎಂದರೆ ಸಾಮಾನ್ಯ ಹುದ್ದೆಯಲ್ಲ. ವರ್ಷಕ್ಕೆ ಸುಮಾರು 310 ಕೋಟಿ ರೂಪಾಯಿ ಸಂಬಳ ಎಂದರೆ, ಈತನೇರಿದ ಎತ್ತರವನ್ನು ಊಹಿಸಬಹುದು. ಭಾರತಕ್ಕೆ ಬಂದರೆ ಖುದ್ದು ಪ್ರಧಾನಮಂತ್ರಿಯೇ ಈತನನ್ನು ಭೇಟಿ ಮಾಡಲು ಉತ್ಸಾಹ ತೋರಿಸುತ್ತಾರೆ. ಹೊಸ ತಲೆಮಾರಿನ ಭಾರತದಲ್ಲಿ ಈ ತೆರನಾದ ಯಶೋಗಾಥೆಗಳ ಪಟ್ಟಿಯೇ ಇದೆ. ಇವತ್ತು ಜಾಗತಿಕ ಮಟ್ಟದ ದೈತ್ಯ ಬಹುರಾಷ್ಟ್ರೀಯ ಕಂಪೆನಿಗಳ ಸಿಇಓ ಪಟ್ಟಿಯಲ್ಲಿ ಅನೇಕ ಭಾರತೀಯರಿದ್ದಾರೆ. ಮೈಕ್ರೊಸಾಫ್ಟಾನ ಸಿಇಓ ಸತ್ಯ ನಾಡೆಲ್ಲಾ, ಪೆಪ್ಸಿಕೋ ಕಂಪೆನಿಯ ಮುಖ್ಯಸ್ಥೆ ಇಂದ್ರಾ ನೂಯಿ, ಮಾಸ್ಟರ್ ಕಾರ್ಡ್ ನ ಸಿಇಓ ಅಜಯ್ ಬಂಗಾ, ನೋಕಿಯಾ ಕಂಪೆನಿಯ ಸಿಇಓ ರಾಜೀವ್ ಸೂರಿ, ಡಾಟ್ಚೆ ಬ್ಯಾಂಕಿನ ಸಿಇಓ ಅಂಶು ಜೈನ್- ಹೀಗೆ ಭಾರತೀಯರ ಒಂದು ಪೀಳಿಗೆಯೇ ಜಗತ್ತಿನ ಕಣ್ಣುಕುಕ್ಕುವ ಹುದ್ದೆಗಳಲ್ಲಿ ರಾರಾಜಿಸುತ್ತಿದೆ. ಇವರೆಲ್ಲರಿಗೆ ಹೋಲಿಸಿದರೂ ಸುಂದರ್ ಪಿಚೈ ಯ ಉನ್ನತಿ ಮಿಂಚಿನ ವೇಗದ್ದು.

ಸುಂದರ್ ಪಿಚೈ ಬಾಲ್ಯದಲ್ಲೇ ಬುದ್ಧಿವಂತ ಹುಡುಗ. 12ರ ಹರೆಯದಲ್ಲಿ ಮನೆಗೆ ಫೋನ್ ಬಂದಾಗಲೇ ಈತನ ಚುರುಕುತನ ಅಪ್ಪನ ಗಮನಕ್ಕೆ ಬಂದಿತ್ತು. ಮನೆಗೆ ಯಾರೇ ಫೋನ್ ಮಾಡಿದರೂ ಆ ನಂಬರ್‌ಗಳು ಸುಂದರ್‌ನ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಇರುತ್ತಿತ್ತಂತೆ. ಅಂಕಿಗಳ ಕುರಿತ ಮೋಹವದು. ಈತನ ಚುರುಕುತನಕ್ಕೆ ಪ್ರೋತ್ಸಾಹ ನೀಡಿದ ಅಪ್ಪ- ಅಮ್ಮನ ಆಶಯದಂತೆ ಐಐಟಿ ಖರಗ್‌ಪುರದಲ್ಲಿ ಮೆಟಲರ್ಜಿಕಲ್ ಎಂಜಿನಿಯರಿಂಗ್ ಮುಗಿಸಿದ. 'ಮುಂದೆ ನೀನು ಪಿಎಚ್‌ಡಿ ಮಾಡಬೇಕು' ಎಂದು ಪ್ರಾಧ್ಯಾಪಕರೆಲ್ಲ ಹುರಿದುಂಬಿಸಿದರೆ, ಸುಂದರ್ ಅದನ್ನು ಒಪ್ಪದೆ ಸ್ಟಾನ್‌ಫೋರ್ಡ್ ಯೂನಿವರ್ಸಿಟಿಯಲ್ಲಿ ಎಂಎಸ್ ಮತ್ತು ಪೆನ್ಸಿಲ್ವೇನಿಯಾ ವಿ.ವಿ ಯಲ್ಲಿ ಎಂಬಿಎ ಮಾಡಲು ಅರ್ಜಿ ಸಲ್ಲಿಸಿದ. ಸೀಟು ಸಿಕ್ಕಿತು. ಆದರೆ ವಿಮಾನದ ಟಿಕೆಟ್ ಮತ್ತು ವಾಸ್ತವ್ಯದ ಖರ್ಚಿಗೆಂದು ಅಪ್ಪ ಬ್ಯಾಂಕ್ ಸಾಲಕ್ಕೆ ಅರ್ಜಿ ಹಾಕಿದರೆ ಸಕಾಲಕ್ಕೆ ಸಾಲ ಸಿಗಲಿಲ್ಲ. ತನ್ನ ಜೀವಿತಾವಧಿಯ ಉಳಿತಾಯದ ಹಣದಲ್ಲೇ ಅಪ್ಪ ಮಗನನ್ನು ಅಮೆರಿಕಕ್ಕೆ ಕಳಿಸಿದ. ಅಪ್ಪನ ಸ್ಥಿತಿಯನ್ನು ಗ್ರಹಿಸಿದ ಮಗ, ಉನ್ನತ ವಿದ್ಯಾಭ್ಯಾಸದ ಆಸೆಯನ್ನು ಒತ್ತಟ್ಟಿಗಿಟ್ಟು ಮೊದಲು ಸಿಲಿಕಾನ್ ವ್ಯಾಲಿಯ ಸೆಮಿಕಂಡಕ್ಟರ್ ತಯಾರಿಕೆ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿದ. ಆ ಬಳಿಕ ಎಂಎಸ್, ಎಂಬಿಎ ಎರಡನ್ನೂ ಮುಗಿಸಿದ. ಅಲ್ಲಿಂದ 2004ರಲ್ಲಿ ಗೂಗಲ್ ಕಂಪೆನಿ ಸೇರಿದ.

ಆರಂಭದಲ್ಲಿ ಜಿಮೇಲ್, ಗೂಗಲ್ ಮ್ಯಾಪ್ಸ್ ಗಳ ಅಭಿವೃದ್ಧಿ ಮೇಲ್ವಿಚಾರಣೆಯ ಕೆಲಸ. ತನ್ನ ಬುದ್ಧಿಮತ್ತೆಯಿಂದ ಎಲ್ಲರ ಮನಗೆದ್ದ ಸುಂದರ್, ಕ್ರೋಮ್ ಓಎಸ್, ಕ್ರೋಮ್‌ಬುಕ್, ವೀಡಿಯೊಕೋಡ್ ವಿಪಿ8 ಮತ್ತು ಹೊಸ ವೀಡಿಯೊ ಫಾರ್ಮ್ಯಾಟ್ ವೆಬ್‌ಎಂ ಗಳ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ. ಮೊದಲು ಟೂಲ್‌ಬಾರ್ ನಿರ್ವಹಣೆಯಲ್ಲಿ ವಹಿಸಿದ ಮಹತ್ವದ ಪಾತ್ರ ಕಂಪೆನಿಯಲ್ಲಿ ಈತನ ತೂಕ ಹೆಚ್ಚಿಸಿತು. ಆ ಬಳಿಕ ಬಂದ ಉತ್ಪನ್ನ ಕ್ರೋಮ್, ಜಾಗತಿಕ ಬ್ರೌಸರ್ ಮಾರುಕಟ್ಟೆಯಲ್ಲಿ ಶೇಕಡಾ 32ರಷ್ಟು ಪಾಲು ಕೊಳ್ಳೆಹೊಡೆದು ಎದುರಾಳಿ ಕಂಪೆನಿಗಳ ತೊಳ್ಳೆ ನಡುಗಿಸಿದ್ದೇ ಸುಂದರ್‌ಗೆ ವರವಾಯಿತು. 66 ಶತಕೋಟಿ ಡಾಲರ್ ವಾರ್ಷಿಕ ಆದಾಯದ ದೈತ್ಯ ಕಂಪೆನಿಯ ಸಿಇಓ ಆಗಿದ್ದ ಲ್ಯಾರಿ ಪೇಜ್, ತನ್ನ ಜವಾಬ್ದಾರಿಯನ್ನು ಈತನ ಹೆಗಲಿಗೆ ವರ್ಗಾಯಿಸಲು ನಿರ್ಧರಿಸಿದ. ಕಂಪೆನಿಯ ಪುನರ್ರಚನೆಯ ಅಂಗವಾಗಿ ಕಳೆದ ವರ್ಷ ಅಲ್ಫಾಬೆಟ್ ಇಂಕ್. ಸ್ಥಾಪನೆಯಾಯಿತು. ಅದರ ಅಂಗಸಂಸ್ಥೆಯಾಗಿ ಗೂಗಲ್ ಹೊಸ ಅವತಾರ ಪಡೆಯಿತು. ಅದಕ್ಕೆ ಸಿಇಓ ಆಗಿ ಸುಂದರ್ ಅಧಿಕಾರ ವಹಿಸಿಕೊಂಡ. ಈಗ ಗೂಗಲ್‌ನಲ್ಲಿ ಸರ್ಚ್, ಆ್ಯಡ್ಸ್, ಮ್ಯಾಪ್ಸ್, ಆ್ಯಪ್ಸ್, ಯುಟ್ಯೂಬ್, ಆ್ಯಂಡ್ರಾಯ್ಡ್, ಕ್ಯಾಲಿಕೊ, ನೆಸ್ಟ್, ಫೈಬರ್ ಮುಂತಾದ ಉತ್ಪನ್ನಗಳ ನೇತೃತ್ವ ಪಿಚೈಯದ್ದೇ. ಜತೆಗೆ ಹೂಡಿಕೆ ಸಂಸ್ಥೆಗಳಾದ ಗೂಗಲ್ ವೆಂಚರ್ ಮತ್ತು ಕ್ಯಾಪಿಟಲ್‌ನ ಮುಖ್ಯಸ್ಥನೂ ಈತನೇ. ಇನ್ನೇನು ಗೂಗಲ್ ಬಿಟ್ಟು ಸುಂದರ್ ಪಿಚೈ ಮೈಕ್ರೊಸಾಫ್ಟ್ ಕಂಪೆನಿಯ ಸಿಇಓ ಆಗುತ್ತಾನೆಂದು ಸುದ್ದಿ ಹಬ್ಬಿದ್ದಾಗಲೇ ಈತನ ವಾರ್ಷಿಕ ಸಂಬಳದ ಪ್ಯಾಕೇಜ್ 310 ಕೋಟಿ ರೂಪಾಯಿಗೆ ಏರಿದ್ದು ಎನ್ನುವ ಸುದ್ದಿ ಸುಳ್ಳಿರಲಿಕ್ಕಿಲ್ಲ. ಕಳೆದ ವಾರ ಭಾರತಕ್ಕೆ ಬಂದ ಪಿಚೈ, ಇಲ್ಲಿ ಹಲವು ವಾಣಿಜ್ಯ ಒಪ್ಪಂದಗಳಿಗೆ ಸಹಿ ಹಾಕಿದ್ದಾನೆ. ಮದ್ರಾಸಿನ ಕಾಲೇಜಿನಲ್ಲಿ ಕ್ರಿಕೆಟ್ ತಂಡದ ಕ್ಯಾಪ್ಟನ್ ಆಗಿದ್ದು ಗಾವಸ್ಕರ್ ಅಭಿಮಾನಿಯಾಗಿದ್ದ ಪಿಚೈ, ಭಾರತಕ್ಕೆ ಬಂದಾಗ ಇಂಡಿಯಾ ಗೇಟ್‌ನಲ್ಲಿ ಹುಡುಗರ ಜತೆ ಸೇರಿ ಕ್ರಿಕೆಟ್ ಆಡಿದ್ದೂ ದೊಡ್ಡ ಸುದ್ದಿಯಾಯಿತು. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65